ಇ) ನೀರು ಸರಬರಾಜು ಯೋಜನೆಗಳಿಗಾಗಿ ಒನೇ ಪಂಚವಾರ್ಷಿಕ ಯೋಜನೆಯಲ್ಲಿ ೩೮.೦೦ ಕೋಟಿ ರೂ.ಗಳನ್ನು ನಿಗದಿಪಡಿಸಲಾಗಿದ್ದು ಇದರ ಪೈಕಿ ಪ್ರತಿ ವರ್ಷ ೭.೦೦ ಕೋಟಿ ರೂ.ಗಳನ್ನು ಮಾತ್ರವೇ ಒನೇ ಪಂಚವಾರ್ಷಿಕ ಯೋಜನೆಯಲ್ಲಿ ಬಿಡುಗಡೆ ಮಾಡಲಾಗುತ್ತಿದೆ. ಕಾರ್ಯಪ್ರಗತಿಯಲ್ಲಿರುವ ಈಗಿನ ೩೯ ನೀರು ಸರಬರಾಜು ಯೋಜನೆಗಳನ್ನು ಪೂರ್ಣಗೊಳಿಸಲು ೪೩.೭೨ ಕೋಟಿ ರೂ.ಗಳು ಬೇಕಾಗಿದ್ದು ಈಗ ಬಿಡುಗಡೆ ಮಾಡುತ್ತಿರುವ ಪ್ರತಿ ವರ್ಷಕ್ಕೆ ೭.೦೦ ಕೋಟಿ ರೂ.ಗಳಂತೆ ಈ ಯೋಜನೆಗಳನ್ನು ಇದೇ ವೇಗದಲ್ಲಿ ಪೂರ್ಣಗೊಳಿಸಲು ಸುಮಾರು ೬ ವರ್ಷಗಳು ಬೇಕಾಗುವುದು.

ಬಿಜಾಪುರ ನಗರದಲ್ಲಿ ತೋಡಲಾದ ಕೊಳವೆ ಬಾವಿಗಳ ಬಗ್ಗೆ

೮೮ (೩೮೨) ಶ್ರೀ ಎಂ.ಎಲ್. ಉಸ್ತಾದ್ (ಬಿಜಾಪುರ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ೧೯೮೭ರಲ್ಲಿ ಬಿಜಾಪುರ ನಗರದಲ್ಲಿ ತೋಡಲಾದ ಕೊಳವೆ ಬಾವಿಗಳೆಷ್ಟು?

ಆ) ಮೇಲ್ಕಾಣಿಸಿದ ಕೆಲಸಗಳಿಗೆ ಟೆಂಡರ್‌ಗಳನ್ನು ಕರೆಯಲಾಗಿದೆಯೇ?

ಇ) ನಗರ ಸಭೆಯವರನ್ನು ಹಾಗೂ ಸ್ಥಳೀಯ ಶಾಸಕರನ್ನು ಈ ವಿಷಯದ ಬಗ್ಗೆ ವಿಚಾರಿಸಲಾಗಿದೆಯೇ?

ಈ) ಇಲ್ಲದಿದ್ದರೆ ಅದಕ್ಕೆ ಕಾರಣಗಳೇನು?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).—

ಅ) ೬೧ ಕೊಳವೆ ಬಾವಿಗಳು.

ಆ) ಹಾಂದು. (ಮಂಡಳಿಯು ನಿಗದಿತ ದರಗಳಲ್ಲಿ ಅಂಗೀಕೃತ ಕೊರೆಯುವ ಸಂಸ್ಥೆಗಳ ಮೂಲಕ).

ಇ) ಹೌದು.

ಈ) ಉದ್ಭವಿಸುವುದಿಲ್ಲ.

ಫುಟ್‌ಬಾಲ್ ಕ್ರೀಡಾಂಗಣವನ್ನು ನಿರ್ಮಿಸುವ ಬಗ್ಗೆ

೯೦ (೧೫೧) ಶ್ರೀ ರೋಷನ್ ಬೇಗ್ (ಶಿವಾಜಿನಗರ).—ಮಾನ್ಯ ಯುವಜನ ಸೇವಾ ಮತ್ತು ಕ್ರೀಡಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಫುಟ್‌ಬಾಲ್ ಕ್ರೀಡಾಂಗಣವನ್ನು ನಿರ್ಮಿಸಲು ಯಾವ ವರ್ಷದಲ್ಲಿ ಪ್ರಾರಂಭಿಸಲಾಯಿತು? ಅಂದಾಜು ವೆಚ್ಚ ಮತ್ತು ಎಂದು ಪೂರ್ಣವಾಗಬೇಕಾಗಿತ್ತು?

ಆ) ಕ್ರೀಡಾಂಗಣ ನಿರ್ಮಾಣವು ಅಪೂರ್ಣವಾಗಿರುವುದು ನಿಜವೇ, ಹಾಗಿದ್ದರೆ ಕಾರಣಗಳೇನು?

ಶ್ರೀ ಬಿ.ಎಲ್. ಶಂಕರ್ (ಯುವಜನ ಮತ್ತು ಕ್ರೀಡಾ ರಾಜ್ಯ ಮಂತ್ರಿಗಳು).—

ಅ) ಅಕ್ಟೋಬರ್ ೧೯೭೧ರಂದು. ಅಂದಾಜು ವೆಚ್ಚ ರೂ. ೪೫.೦೦ ಲಕ್ಷಗಳು ೧೯೮೦-೮೧ ರಂದು ಪೂರ್ಣಗೊಳಿಸುವ ಅಂದಾಜಿತ್ತು.

ಆ) ಹೌದು, ಮುಖ್ಯವಾಗಿ ಬೆಲೆಗಳ ಹೆಚ್ಚಳ ಮತ್ತು ಆರ್ಥಿಕ ಮುಗ್ಗಟ್ಟು.

ವಕ್ಫ್ ಮಂಡಲದ ವತಿಯಿಂದ ಮುಸ್ಲಿಂ ವಸತಿ ನಿಲಯಗಳನ್ನು ಕಟ್ಟುವ ಬಗ್ಗೆ

೯೧ (೧೫೩) ಶ್ರೀ ಆರ್. ರೋಶನ್ ಬೇಗ್ (ಶಿವಾಜಿನಗರ).—ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ವಕ್ಫ್ ಆಸ್ತಿಗಳಿಗೆ ಸರ್ಕಾರದವರು ವಕ್ಫ್ ಮಂಡಳಿಯ ಹಣದಿಂದ ಮುಸ್ಲಿಂ ವಿದ್ಯಾರ್ಥಿಗಳಿಗೆ ವಸತಿ ನಿಲಯಗಳನ್ನು ಕಟ್ಟಿಸುವುದೋಸ್ಕರ ವಿಚಾರಿಸುವಿರೇ ?

ಆ) ಹಾಗಿದ್ದಲ್ಲಿ, ಇಂತಹ ವಸತಿ ನಿಲಯಗಳನ್ನು ಕಟ್ಟುವ ಬಗ್ಗೆ ಪ್ರತಿ ಜಿಲ್ಲಾ ಕೇಂದ್ರ ಸ್ಥಳಗಳಲ್ಲಿ ಲಭ್ಯವಿರುವ ವಕ್ಫ್ ಆಸ್ತಿಗಳನ್ನು ಗುರುತಿಸಲು ಭೂಮಾಪನ ಮಾಡುವಿರ ?

೫) ರಾಜ್ಯದಲ್ಲಿ ವಕ್ಫ್ ಆಸ್ತಿಗಳ ಮೇಲೆ ಅತಿಕ್ರಮಣವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ? ಹಾಗಿದ್ದಲ್ಲಿ, ಜಿಲ್ಲಾವಾರು ಪಟ್ಟಿಯನ್ನು ಒದಗಿಸಬೇಕು ?

೬) ಈ ಅತಿಕ್ರಮಣ ತೆಗೆದು ಹಾಕುವ ಬಗ್ಗೆ ಸರ್ಕಾರದವರು ಕೈ ಕೊಂಡ ಕ್ರಮವೇನು ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ, ಪಂಚಾಯಿತ್ ರಾಜ್ ಮತ್ತು ವಕ್ಫ್ ಮಂತ್ರಿಗಳು).—

೫) ಇಲ್ಲ.

೬) ಉದ್ಭವಿಸುವುದಿಲ್ಲ.

೭) ಹೌದು. ಜಿಲ್ಲಾವಾರು ಪಟ್ಟಿಯನ್ನು ಲಗತ್ತಿಸಿದೆ.

೮) ಕಂದಾಯ ಇಲಾಖೆಯ ಅಧಿಕಾರಿಗಳಿಗೆ ಈ ಅತಿಕ್ರಮಣವನ್ನು ತೆಗೆದು ಹಾಕಲು ಸೂಕ್ತ ಆದೇಶ ನೀಡಲಾಗಿದೆ. ಅಧಿಕಾರಿಗಳು ಕ್ರಮ ಕೈ ಕೊಳ್ಳುತ್ತಿದ್ದಾರೆ.

ಅತಿಕ್ರಮಣವಾಗಿರುವ ವಕ್ಫ್ ಆಸ್ತಿಗಳ ಜಿಲ್ಲಾವಾರು ಪಟ್ಟಿ

ಕ್ರಮಸಂಖ್ಯೆ	ಜಿಲ್ಲೆಯ ಹೆಸರು		ದಾವೆಗಳ ಸಂಖ್ಯೆ
೧	೨		೩
೧.	ಬೆಂಗಳೂರು (ಗ್ರಾಮೀಣ)	...	೫
೨.	ತುಮಕೂರು	...	೩
೩.	ಚಿತ್ರದುರ್ಗ	...	೨೪
೪.	ಶಿವಮೊಗ್ಗ	...	೨೦
೫.	ಕೋಲಾರ	...	೩೩
೬.	ಮೈಸೂರು	...	೭
೭.	ಮಂಡ್ಯ	...	೨
೮.	ಹಾಸನ	...	೧೮
೯.	ದಕ್ಷಿಣ ಕನ್ನಡ	...	೪
೧೦.	ಚಿಕ್ಕಮಗಳೂರು	...	೧೧
೧೧.	ಕೊಡಗು	...	೨
೧೨.	ಗುಲ್ಬರ್ಗಾ	...	೭
೧೩.	ಬೀದರ್	...	೧೬
೧೪.	ರಾಯಚೂರು	...	೭
೧೫.	ಬಳ್ಳಾರಿ	...	೩
೧೬.	ಬೆಳಗಾವಿ	...	೯
೧೭.	ಬಿಜಾಪುರ	...	೧೭
೧೮.	ಧಾರವಾಡ	...	೪
೧೯.	ಉತ್ತರ ಕನ್ನಡ	...	೨